"ನನ್ನ ಅಭಿಪ್ರಾಯ ಅಂದ್ರೆ ಹೇಗಿದ್ರೂ ಈಗ ಲಿಜರ್ ಇರ್ತಾರಲ್ವಾ ಅಂತ.''

"ಸರಿ, ಹೇಗೋ ಮ್ಯಾನೇಜ್ ಮಾಡ್ತೀನಿ. ಎಲ್ಲಿಗೆ ಹೋಗೋಣ'' ಎಂದಳು.

"ಮಿನರ್ವ.''

"ಓಕೆ'' ಎಂದಳು.

ಸಾಯಂಕಾಲ ಐದರ ನಂತರ ಇಬ್ಬರೂ ಬೈಕ್ ಮೇಲೆ ಮಿನರ್ವ ಹತ್ತಿರ ಹೋದರು. ಇಬ್ಬರೂ ಟೇಬಲ್ ಬಳಿ ಹೋಗಿ ವೇಯ್ಟರ್‌ಗಾಗಿ ಕಾದರು.

ವೇಯ್ಟರ್ ಶ್ರದ್ಧೆಯಿಂದ ಮೆನು ಕಾರ್ಡ್ ತೋರಿಸಿದ.

ಒಂದು ರವಾ ದೋಸೆ, ಒಂದು ಪ್ಲೇಟ್ ಬಟನ್ ಇಡ್ಲಿ ಆರ್ಡರ್ ಮಾಡಿದರು.

ಕೆಲವು ಕ್ಷಣಗಳು ಇಬ್ಬರ ಮಧ್ಯೆ ಮೌನ ಆವರಿಸಿತ್ತು. ಮೆಲ್ಲಗೆ ಸಂಜೀವ್ ಮಾತು ಶುರುಮಾಡಿದ.

''ನಾನು ಟ್ರಾನ್ಸ್‌ಫರ್ ಮಾಡಿಸಿಕೊಂಡು ಹೋಗೋಣಾಂತ ಇದ್ದೀನಿ'' ಎಂದ.

''ವಾಟ್!'' ಎಂದಳು ಸ್ರವಂತಿ.

''ಇಷ್ಟು ಸಡನ್ ಆಗಿ... ಈ ನಿರ್ಧಾರ ಯಾಕೆ?''

''ಹಾಗೇನಿಲ್ಲ. ನಿನ್ನ ಹೀಗೆ ನೋಡ್ತಾ ಆಫೀಸ್‌ನಲ್ಲಿ ಕೆಲಸ ಮಾಡೋದು ನರಕ ಯಾತನೆ'' ಎಂದ ಸಂಜೀವ್.

''ನನಗೂ, ನಿಮ್ಮ ಟ್ರಾನ್ಸ್‌ಫರ್‌ಗೂ ಯಾಕೆ ಜೋಡಿಸ್ತಾ ಇದ್ದೀರಾ?'' ಎಂದಳು ತುಸು ಕೋಪದಿಂದಲೇ.

''ನನ್ನ ಮಾತು ಕೇಳದವರ ಜೊತೆ ಕೆಲಸ ಮಾಡೋದು, ಅದರಲ್ಲೂ ಸ್ನೇಹವನ್ನು ಮುಂದುವರಿಸೋದು ಕಷ್ಟ'' ಅಂತ ಬಿಡಿಸಿ ಹೇಳಿದಾಗ ಸ್ರವಂತಿ ಏನೂ ಮಾತನಾಡಲಿಲ್ಲ.

ಸ್ವಲ್ಪ ಸಮಯದ ನಂತರ, ''ನಿಮ್ಮದು ಮೇಲ್ ಇಗೋ... ಮೊದಲ ಸಲ ನಿಮ್ಮಲ್ಲಿ 'ರಾಮ್' ಕಾಣಿಸ್ತಾ ಇದ್ದಾನೆ'' ಎಂದು ಸ್ರವಂತಿ ಅಂದಾಗ ನಿಬ್ಬೆರಗಾದ.

''ನನ್ನ ಮಾತು ಗೆಲ್ಲಬೇಕು ಎಂಬ ಹಟ ನಿಮ್ಮಲ್ಲಿ ಎದ್ದು ಕಾಣ್ತಾ ಇದೆ.''

''ನನಗೆ ಗೊತ್ತು ಈ ಮಾತು ಹೇಳ್ತೀಯಾ ಅಂತ. ಆದ್ರೂ ನಿನ್ನ ಈ ರೀತಿ ನೋಡೋಕಾಗ್ತಾ ಇಲ್ಲ."

''ನಿಮ್ಮ ನಿರ್ಧಾರ ಬದಲಾಯಿಸೋಕೆ ಆಗಲ್ವಾ?" ಎಂದ ಅವಳ ಮಾತು ಮನವಿ ಮಾಡಿಕೊಂಡಂತಿತ್ತು.

"ಯಾಕೆ ಬದಲಾಗಲ್ಲ, ನಿನ್ನ ನಿರ್ಧಾರ ಕೂಡ ಬದಲಾದರೆ."

''ಹೀಗೆ ಲಿಂಕ್‌ಗಳನ್ನ ಜೋಡಿಸಬೇಡಿ. ನಾನು ಚೆನ್ನಾಗಿದ್ದೀನಿ. ಧರಣಿ ನನ್ನ ಜೀವನದ ಒಂದು ಭಾಗವಾಗಿದ್ದಾಳೆ. ಜೀವನ ಸಂಪೂರ್ಣವಾಗಿದೆ'' ಎಂದಳು.

"ಇದು ಆತ್ಮವಂಚನೆ" ಎಂದ ಸಂಜೀವ್.

"ಇತರರ ಮಾತುಗಳಿಗೆ ಆಹಾರವಾಗೋದಕ್ಕಿಂತ ಒಳ್ಳೆಯದಲ್ಲವೇ?"

"ನಿನ್ನ ಜೊತೆ ವಾದ ಮಾಡಲಿಕ್ಕೆ ನನ್ನ ಕೈಯಲ್ಲಿ ಆಗೋಲ್ಲ. ನನ್ನ ಬಿಟ್ಟುಬಿಡು. ಏನೋ ಹೇಳಬೇಕು ಅಂತ ಅನಿಸಿತು. ಹೇಳಿದೆ" ಎಂದಾಗ ಅವಳ ಕಣ್ಣುಗಳಲ್ಲಿ ತೆಳುವಾದ ಕಣ್ಣೀರು ಉಕ್ಕಲು ಸಿದ್ಧವಾಗಿತ್ತು.

''ಈ ಕಣ್ಣೀರು ನನ್ನ ಕರಗಿಸೋಲ್ಲ ಸ್ರವಂತಿ.''